

# ಕಿವಿ ಚುಚ್ಚುವ ಬೇಸರ-ಸಂಭ್ರಮ

ಮಗುವಿಗೆ ಕಿವಿ ಚುಚ್ಚುವುದು ಪಾಲಕರಿಗೆ ಸಂತಸದ ಸಂಗತಿ. ಆ ಗಳಿಗೆ ಮಗುವಿಗೆ ಆಗಬಹುದಾದ ನೋವಿನ ಅಂದಾಜು ಸಂಭ್ರಮದಲ್ಲೂ ವಿಷಾದ ಮೂಡಿಸಬಲ್ಲದು.

■ ಸ್ವಯಂಪ್ರಭಾ

ಅಮ್ಮನ ಮಡಿಲಿನಲ್ಲಿ ಮುದ್ದಾಗಿ ಮಲಗಿರುವ ಕಂದಮ್ಮ. ಅದು ಎಷ್ಟು ಪುಟ್ಟದೆಂದರೆ, ಇನ್ನೂ ಅದರ ಹಾಲುಗಲ್ಲದ ಹಸಿ ಆರಿಲ್ಲ. ನಾಮಕರಣಕ್ಕೆಂದು ಅಮ್ಮನ ಮಡಿಲಿನಲ್ಲಿ ಮಲಗಿದೆ. ಸುತ್ತಲೂ ನಡೆಯುತ್ತಿರುವ ತಯಾರಿ ಅದರ ಅರಿವಿಗೆ ಬಂದಿಲ್ಲ. ನಾಮಕರಣದ ಭರ್ಜರಿ ಊಟದ ಶಾಸ್ತ್ರವಾದ ಬಳಿಕ, ಸಂಜೆವೇಳೆ ಕಿವಿ ಚುಚ್ಚುವುದಕ್ಕೆಂದು ತಯಾರಿ ಮಾಡಿಕೊಂಡಿದ್ದಾರೆ. ಜೋಡಿ ಬಾಳೆಲೆಯ ಮೇಲೆ ಅಕ್ಕಿ–ಕಾಯಿ, ವೀಳ್ಯದೆಲೆ, ದಕ್ಷಿಣೆಯನ್ನು ಇರಿಸಲಾಗಿದೆ. ಅರಿಶಿಣ, ಸುಣ್ಣವನ್ನು ಶುದ್ಧ ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಒಂದು ಬೆಳ್ಳಿ ಬಟ್ಟಲಿನಲ್ಲಿ ಇಟ್ಟಿದ್ದಾರೆ. ಚಿನ್ನದ ಟಿಕ್ಕಿಯ 'ಫಿರ್ಕಿ'ಗೆ ಚಿನ್ನದ್ದೇ ಸೂಜಿ ಮಾಡಿ ಅಳವಡಿಸಿದ್ದಾರೆ. ಒಂದೇ ಬಾರಿ ಚುಚ್ಚಿದಾಗ ಕಿವಿ ತೂತಾಗಬೇಕು, ಮಗುವಿಗೆ ಹೆಚ್ಚು ನೋವಾಗಬಾರದು ಎಂದು ಎಲ್ಲ ಕಾಳಜಿಯನ್ನು ಮಾಡಿಕೊಂಡಿದ್ದಾರೆ.

ಆದರೆ ದೊಡ್ಡವರ ನಡುವೆ ಒಳಗೊಳಗೇ ಅಸಮಾಧಾನ. ಅಜ್ಜಿಯೋ, ಸಾಂಪ್ರದಾಯಿಕ ಶೈಲಿಯಲ್ಲಿಯೇ ಕಿವಿಚುಚ್ಚಬೇಕು ಎಂದು ಹಟ ಹಿಡಿದಿದ್ದರಿಂದ ಈ ಎಲ್ಲ ವ್ಯವಸ್ಥೆ ಮಾಡಲಾಗಿದೆ. ಆದರೆ ಮಗುವಿನ ಅಮ್ಮ ಗನ್ ಶಾಟ್ ಮಾಡಬೇಕು ಎಂದು ತಗಾದೆ ಮಾಡಿದ್ದಾರೆ. ಮಗುವಿನ ಅಪ್ಪನಿಗೆ ಎಲ್ಲಿಲ್ಲದ ಸಿಟ್ಟು ನೆತ್ತಿಗೇರಿದೆ: ಇಷ್ಟು ಚಿಕ್ಕ ಮಗುವಿಗೆ ಕಿವಿ ಚುಚ್ಚುವುದಾದರೂ ಏತಕ್ಕೆ?

ಆಗ ಆಕೆಯ ಸ್ನೇಹಿತೆ ಹೇಳಿದಳು, 'ಗನ್ ಶಾಟ್ ಮಾಡಿದ್ರೂ ಮಗುವಿಗೆ ನೋವಾಗುತ್ತೆ, ಚಿನ್ನದ ಸೂಜಿ ಅಳವಡಿಸಿ ಚುಚ್ಚಿದರೂ ಮಗುವಿಗೆ ನೋವಾಗುತ್ತದೆ. ಎರಡೂ ವಿಧಾನದಲ್ಲಿ ಮಗುವಿಗೆ ನೋವಿನ ಅರಿವು ಎಷ್ಟರ ಮಟ್ಟಿಗೆ ಆಗುತ್ತದೆ ಎನ್ನುವುದಷ್ಟೇ ವ್ಯತ್ಯಾಸ. ಗನ್ ಶಾಟ್ ಮಾಡಿದಾಗ ನೋವಿನ ಅರಿವು ಕಡಿಮೆಯಾಗುತ್ತದಷ್ಟೇ'.

ಕಿವಿ ಚುಚ್ಚಲು ಬಂದ ಗಣೇಶ್ ವಿಶ್ವಕರ್ಮ ಅವರದು ಮತ್ತೊಂದು ವಾದವಿದೆ, 'ಗನ್ ಶಾಟ್ ಮಾಡಿದಾಗ, ತೂತಿನಷ್ಟು ಭಾಗದ ಚರ್ಮವು ಕತ್ತರಿಸಲ್ಪಡುತ್ತದೆ. ಸೂಜಿಯಿಂದ ಚುಚ್ಚುವಾಗ, ಸೂಜಿಯ ಮೊನೆಯು ಚರ್ಮವನ್ನು ಸೀಳಿಕೊಂಡು ಹೋಗುತ್ತದೆಯಷ್ಟೇ. ಆದ್ದರಿಂದ ಅದು ಮತ್ತೆ ಮುಚ್ಚದಂತೆ ನಿರಂತರವಾಗಿ ಒಂದು ಚೂರು ಚಿನ್ನವನ್ನೋ, ತುಳಸಿ ಅಥವ ಬೇವಿನ ಕಡ್ಡಿಯನ್ನೋ ಇರಿಸುವುದು ಅತ್ಯಗತ್ಯ. ಆದರೆ ಗನ್ ಶಾಟ್ ಮಾಡಿದ ಬಳಿಕ ತೂತು ಮುಚ್ಚುವುದು ಬಹಳ ನಿಧಾನವಾಗಿರುತ್ತದೆ' ಎಂಬ ವಿಶ್ಲೇಷಣೆ ಅವರದು.

ಮಗುವಿಗೆ ಬೇಗನೇ ಕಿವಿ ಚುಚ್ಚಿಸಬೇಕೇ, ಒಂದೆರಡು ವರ್ಷಗಳ ಬಳಿಕ ಕಿವಿ ಚುಚ್ಚಿಸಬೇಕೇ ಎಂಬ ಜಿಜ್ಞಾಸೆ ಹೆಚ್ಚಿನ ಮನೆಗಳಲ್ಲಿ ನಡೆಯುತ್ತದೆ. ಗಂಡು ಮಗುವಾದರೆ, ಈ ಚರ್ಚೆಯನ್ನು ದೂರವಿಡಬಹುದು. ಆದರೆ ಹೆಣ್ಣು ಮಗುವಾದರೆ ಈ ಚರ್ಚೆ ನಡೆಯದ ಮನೆಯಿಲ್ಲ ಎನ್ನಬೇಕು.

ಮನುಷ್ಯನ ಜೀವಕೋಶಗಳು ವಿಭಜನೆಯಾಗುವ ವೇಗವು ಚಿಕ್ಕಂದಿನಲ್ಲಿ ಕ್ಷಿಪ್ರಗತಿಯ ಇಲ್ಲಿರುತ್ತದೆ. ಬೆಳೆಯುತ್ತ ಬೆಳೆಯುತ್ತ ಈ ವೇಗವು ವಿಳಂಬಗತಿಗೆ ಸಾಗಿ ಯೌವನದಲ್ಲಿ ಒಂದು ನಿರ್ದಿಷ್ಟ ಗತಿಗೆ ಬಂದು ನಿಲ್ಲುತ್ತದೆ. ವಯಸ್ಸಾದಂತೆ ಬೆಳವಣಿಗೆಯು ಕಡಿಮೆಯಾಗುತ್ತದೆ. ಈ ಗತಿಯನ್ನು ಗಮನಿಸಿದರೆ, ಪುಟಾಣಿ ಮಗುವಿನ ಚರ್ಮವು ವೇಗವಾಗಿ ಬೆಳೆಯುವ ಹಾದಿಯಲ್ಲಿರುತ್ತದೆ. ಹಾಗಾಗಿ ಬೇಗನೇ ಕಿವಿಚುಚ್ಚಿದರೆ ಅದರ ಗಾಯವು ಬೇಗನೇ ಮಾಯವಾಗುವುದು. ಅಲ್ಲದೆ ಹಸುಳೆ ಕಂದನಿಗೆ ನೋವಿನ ಅರಿವು ಕಡಿಮೆಯಾಗುವುದು ಎಂಬ ಗ್ರಹಿಕೆಯು ಹಿರಿಯರದಾಗಿತ್ತು. ಈ ಗ್ರಹಿಕೆಯನ್ನು ಪೂರ್ತಿ ನಿರಾಕರಿಸುವಂತಿಲ್ಲವಾದರೂ, ಮಗುವಿನ ಕಿವಿಗೆ, ಕೈ ಬಟ್ಟೆಯು ಸಿಕ್ಕಿಹಾಕಿಕೊಂಡು ನೋವು ವಿಪರೀತವಾಗಬಹುದು ಎನ್ನುವ ಆತಂಕವೂ ಇದ್ದೇ ಇರುತ್ತದೆ.

ಆಧುನಿಕ ವೈದ್ಯಕೀಯ ಶಾಸ್ತ್ರದ ಪ್ರಕಾರ ಮಗುವಿಗೆ ಕಿವಿಚುಚ್ಚುವ ಪ್ರಕ್ರಿಯೆಯನ್ನು ಒಂದಾರು ತಿಂಗಳು ಕಳೆದ ಬಳಿಕ ಮಾಡಿದರೆ ಉತ್ತಮ. ಕಿವಿ ಚುಚ್ಚುವ ವಿಚಾರವಾಗಿ ಆಕ್ಯುಪಂಕ್ಚರ್ ಕ್ಷೇತ್ರದಲ್ಲಿ ಅನೇಕ ವಿವರಣೆಗಳಿವೆ. ಮಗುವಿನಲ್ಲಿ ಪ್ರತಿರೋಧ ಶಕ್ತಿಯಿದ್ದಾಗ, ಯಾವ ವಿಧಾನದ ಗಾಯವನ್ನಾದರೂ ಅದು ಸಹಿಸಿಕೊಳ್ಳಬಹುದು.

ಯಾವ ವಿಧಾನದಲ್ಲಿ ಕಿವಿ ಚುಚ್ಚಿದರೂ, ನಂತರದ ಆರೈಕೆ ಬಹಳ ಮುಖ್ಯ. ಸಾಂಪ್ರದಾಯಿಕವಾಗಿ ಕಿವಿ ಚುಚ್ಚಿದಾಗ ಅರಿಶಿಣ ಮತ್ತು ಸುಣ್ಣವನ್ನು ತುಪ್ಪದಲ್ಲಿ ಅಥವ ಶುದ್ಧ ತೆಂಗಿನೆಣ್ಣೆಯಲ್ಲಿ ಕಲೆಸಿ, ಬಿಸಿ ಮಾಡಿ ಹಚ್ಚುವುದು ವಾಡಿಕೆ. ಅಥವ ಕುಂಕುಮವನ್ನೇ ಕಲಸಿ ಹಚ್ಚುವ ನಂಬಿಕೆಯೂ ಇದೆ. ಹಿಂದೆಲ್ಲ ಕುಂಕುಮವನ್ನೂ ಶುದ್ಧವಾದ ಅರಿಶಿಣ ಮತ್ತು ಸುಣ್ಣವನ್ನು ಬಳಸಿ ಮಾಡುತ್ತಿದ್ದರು. ಇಂದು, ಹೆಚ್ಚಿನ ಸಂದರ್ಭಗಳಲ್ಲಿ ಅಂಗಡಿಯಿಂದ ತರುವ ಕುಂಕುಮವು ಬಣ್ಣದ ಹುಡಿಯಾಗಿರುತ್ತದೆ. ಅದು ಕಿವಿಯ ಗಾಯಕ್ಕೆ ಸೋಂಕು ಉಂಟುಮಾಡಬಹುದು. ಆದ್ದರಿಂದ ವೈದ್ಯರು ಸಲಹೆ ಮಾಡಿದ ಮುಲಾಮು ಹಚ್ಚುವುದೇ ಒಳ್ಳೆಯದು.

ಒಟ್ಟನಲ್ಲಿ ರೂಢಿಯನ್ನು ಆರೋಗ್ಯವನ್ನೂ ಕಾಪಾಡಿಕೊಂಡು, ಮಗುವನ್ನು ಸುಧಾರಿಸುವುದೊಂದು ಸವಾಲು.

ಮಗುವಿಗೆ ಕಿವಿ ಚುಚ್ಚಿಸುವುದರಲ್ಲಿ ಹಿರಿಯರಾದ ನಾವೊಂದು ಪಾಠ ಕಲಿಯಬಹುದು. ಅದೆಂದರೆ – ಕಿವಿ ಚುಚ್ಚುವುದು ಅಲಂಕಾರಿಕ ಹಾಗೂ ಸಾಂಪ್ರದಾಯಿಕ ಕ್ರಿಯೆ; ಕಿವಿ ಚುಚ್ಚುವುದು ಸಮಾಜದ ಆರೋಗ್ಯಕ್ಕೆ ಒಳ್ಳೆಯದಲ್ಲ.

ಪ್ರತಿಕ್ರಿಯಿಸಿ: feedback@sudha.co.in